## ದಿನಾಂಕ : 04-06-2022 ರಂದು ಬೆಳಿಗ್ಗೆ 11:00 ಗಂಟೆಗೆ ವಾರ್ಡ್-80 ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-80 ಹೊಯ್ಸಳನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ: 04-06-2022 ರಂದು ಬೆಳಿಗ್ಗೆ 11:00 ಗಂಟೆಗೆ ವಾರ್ಡ್‌ನ ನೋಡಲ್ ಅಧಿಕಾರಿಯವರಾದ ಶ್ರೀ.ಎಂ.ಲೋಕೇಶ್ ರವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಮತ್ತು ಅಧಿಕಾರಿ / ನೌಕರರು ಸಭೆಯಲ್ಲಿ ಹಾಜರಾಗಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಎಂ.ಲೋಕೇಶ್ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-80
2. ಶ್ರೀ.ಶಂಕರಪ್ಪ –ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ
3. ಶ್ರೀಮತಿ.ಚಿತ್ರ – ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-80
4. ಶ್ರೀ.ಗೌತಮ್ – ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀಮತಿ.ಪೂರ್ಣಿಮ – ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
6. ಶ್ರೀ.ನವೀನ್ – ಕಿರಿಯ ಆರೋಗ್ಯ ನಿರೀಕ್ಷಕರು,
7. ಶ್ರೀ.ಮಹದೇವ್ – ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ
8. ಶ್ರೀ.ಮಧು.ಎಸ್.ಎಂ – ಮಾರ್ಷಲ್
9. ಶ್ರೀಮತಿ.ಜ್ಯೋತಿಕ – ಮಾರ್ಷಲ್,
10. ಶ್ರೀ.ಹೇಮಂತ್ – ಮಾರ್ಷಲ್,

**ಸದಸ್ಯರು ಮತ್ತು ಸ್ಥಳೀಯ ನಿವಾಸಿಗಳು**

1. ಶ್ರೀ.ಕುಲಕರ್ಣಿ – ಸದಸ್ಯರು,
2. ಶ್ರೀ.ಹರೀಶ್.ಆರ್ –ಸದಸ್ಯರು,
3. ಶ್ರೀ.ಸತೀಶ್ ರಾವ್ – ಸದಸ್ಯರು,
4. ಶ್ರೀಮತಿ.ಮೀನಾ, ನಂ.629, ಇಂದಿರಾನಗರ 2ನೇ ಹಂತ-ಸ್ಥಳೀಯ ನಿವಾಸಿಗಳು
5. ಶ್ರೀ.ಪದ್ಮನಾಭನ್ – ಸದಸ್ಯರು,

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀ.ಶಂಕರಪ್ಪ, ಸಹಾಯಕ ಅಭಿಯಂತರರು ಸದರಿ ಸಭೆಗೆ ಹಾಜರಾಗಿರುವ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ತಾಪಿಸಿ ಬಾಕಿ ಇರುವ ದೂರುಗಳಿಗೆ ಸಂಬಂಧಿಸಿದಂತೆ ಕ್ರಮ ವಹಿಸಲಾಗುವುದೆಂದು ತಿಳಿಸಿ ಸಭೆಯನ್ನು ಪ್ರಾರಂಭಿಸಿದರು.

- ವಾರ್ಡ್ ಸಂಖ್ಯೆ 80 ರ ವ್ಯಾಪ್ತಿಯಲ್ಲಿನ 6ನೇ ಮುಖ್ಯರಸ್ತೆ ಡಿಫೆನ್ಸ್ ಕಾಲೋನಿ, ಬೃಹತ್ ನೀರುಗಾಲುವೆ ಟರ್ಷರಿ ನಾಲಾ ಹೂಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲು ಹಿಂದಿನ ಸಭೆಯಲ್ಲಿ ತಿಳಿಸಿರುವಂತೆ ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದ್ದು, ಶೀಘ್ರವಾಗಿ ಪೂರ್ಣಗೊಳಿಸಲಾಗುವುದೆಂದು ತಿಳಿಸಲಾಯಿತು.

  **(ಕ್ರಮ:- ಬೃಹತ್ ನೀರುಗಾಲುವೆ, ಸಹಾಯಕ ಅಭಿಯಂತರರು)**

- ವಾರ್ಡ್ ಸಂಖ್ಯೆ 80 ರ ವ್ಯಾಪ್ತಿಯಲ್ಲಿನ ಪ್ಲಾಸ್ಟಿಕ್ ಫ್ಯಾಕ್ಟರಿ ಪ್ರದೇಶ ವ್ಯಾಪ್ತಿಯಲ್ಲಿ ಕಸದ ಸಮಸ್ಯೆ ಉಲ್ಬಣಗೊಂಡಿದ್ದು, ಕೂಡಲೇ ಇದನ್ನು ವಾರ್ಡ್‌ನ ಮಾರ್ಷಲ್‌ಗಳೊಂದಿಗೆ ನಿಯಂತ್ರಣ ಮಾಡಲು, ಹಾಗೂ 5ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ 5ನೇ ಅಡ್ಡರಸ್ತೆ, 10ನೇ 'ಎ' ಅಡ್ಡರಸ್ತೆ, ಇಂದಿರಾನಗರ 2ನೇ ಹಂತ ಮತ್ತು ಬಿನ್ನಿಮಂಗಲ ಪ್ರದೇಶದಲ್ಲಿನ ಕಸ ವಿಲೇವಾರಿ ಹಾಗೂ ವಿಂಗಡಣೆಯನ್ನು ರಾಕ್ ಕ್ರಿಸ್ಟಲ್ ಸಂಸ್ಥೆಯ ಸಹಯೋಗದೊಂದಿಗೆ ಘನತ್ಯಾಜ್ಯ

AE- W-80



Scanned with CamScanner

ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯವು ಪ್ರಸ್ತುತ ಕಾರ್ಯಗತಗೊಳಿಸಲಾಗಿರುತ್ತದೆ ಎಂದು ತಿಳಿಸಿದರು.

**(ಕ್ರಮ:-ಕಿರಿಯ ಆರೋಗ್ಯ ಪರಿವೀಕ್ಷಕರು-ಘನತ್ಯಾಜ್ಯ ನಿರ್ವಹಣೆ)**

- ವಾರ್ಡ್ ಸಂಖ್ಯೆ 80 ರ ಕಾಮಗಾರಿ ಇಲಾಖೆಗೆ ಸಂಬಂಧಿಸಿದಂತೆ, ಈ ಹಿಂದಿನ ಸಭೆಯಲ್ಲಿ ಜೈನ್ ಕಾಲೇಜು ಸುತ್ತ-ಮುತ್ತಲಿನ ಪ್ರದೇಶಗಳಿಗೆ ಡಾಂಬರೀಕರಣ ಮಾಡಲು ಹಾಗೂ 6ನೇ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವುಗೊಳಿಸಲು ತಿಳಿಸಲಾಗಿತ್ತು. ಅದರಂತೆ ಒತ್ತುವರಿ ಕಾರ್ಯಾಚರಣೆಯನ್ನು ತೆರವುಗೊಳಿಸಲಾಗಿದ್ದು, ಜೈನ್ ಕಾಲೇಜು ಸುತ್ತ-ಮುತ್ತಲಿನ ಪ್ರದೇಶದ ರಸ್ತೆಗಳಿಗೆ ಪ್ರಸ್ತುತ ವೆಟ್‌ಮಿಕ್ಸ್ ಕಾಮಗಾರಿ ಪ್ರಗತಿಯಲ್ಲಿದ್ದು, ಡಾಂಬರೀಕರಣ ಮಾಡಲು ಇತ್ತೀಚಿನ ಮಳೆಯಿಂದಾಗಿ ವಿಳಂಭವಾಗಿದ್ದು, ಈ ತಿಂಗಳ ಕೊನೆಯಲ್ಲಿ ರಸ್ತೆಯ ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಲಾಗುವುದೆಂದು ಸಹಾಯಕ ಅಭಿಯಂತರರು ಭರವಸೆ ನೀಡಿದರು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚಿನ ಮಳೆಗೆ ರಸ್ತೆ ಬದಿಯಲ್ಲಿ ನಿಲ್ಲುತ್ತಿರುವ ನೀರನ್ನು ನಿಯಂತ್ರಿಸಲು ಸಭೆಯಲ್ಲಿ ತಿಳಿಸಿದರು.

  **(ಕ್ರಮ:- ಕಾಮಗಾರಿ ಇಲಾಖೆಯ ವಾರ್ಡ್‌ನ ಸಹಾಯಕ ಅಭಿಯಂತರರು)**

- 6ನೇ ಮುಖ್ಯರಸ್ತೆ ಜಂಕ್ಷನ್ (100 ಅಡಿ ರಸ್ತೆಗೆ ಹೊಂದಿಕೊಂಡಿರುವ) ಟ್ರಾಫಿಕ್ ಸಮಸ್ಯೆ ಹೆಚ್ಚಾಗುತ್ತಿದ್ದು, ಇದರ ಬಗ್ಗೆ ಕೂಡಲೇ ಕ್ರಮವಹಿಸಲು ಸಂಬಂಧಪಟ್ಟ ಇಲಾಖೆಯವರಿಗೆ ಪತ್ರವನ್ನು ಬರೆದು ಕೂಡಲೇ ಸಮಸ್ಯೆ ಪರಿಹರಿಸಲು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕೆಟ್ಟು ನಿಂತಿರುವ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿರುವುದನ್ನು ಕೂಡಲೇ ತೆರವುಗೊಳಿಸಲು ಸಹಾಯಕ ಅಭಿಯಂತರರು ಕ್ರಮ ವಹಿಸುವುದು.

  **(ಕ್ರಮ:- ಸಂಚಾರ ಪೊಲೀಸ್ ಇಲಾಖೆ)**

- ಸಿ.ಎಂ.ಹೆಚ್ ರಸ್ತೆಯಿಂದ (80 ಅಡಿ ರಸ್ತೆಯಿಂದ 100 ಅಡಿ ರಸ್ತೆಯವರೆಗೆ) ವೈಟ್ ಟಾಂಪಿಂಗ್ ಕಾಮಗಾರಿಯು ಪ್ರಸ್ತುತ ಪ್ರಗತಿಯಲ್ಲಿರುವುದಾಗಿ ಸಭೆಗೆ ತಿಳಿಸಲಾಯಿತು ಹಾಗೂ ಸಿ.ಎಂ.ಹೆಚ್ ರಸ್ತೆಯ ಲಕ್ಷ್ಮೀಪುರ ಸ್ಮಶಾನದ ಮುಂಭಾಗದಲ್ಲಿ, ಆದರ್ಶ ಚಿತ್ರ ಮಂದಿರ, ಡಬಲ್ ರಸ್ತೆ, ಕೆ.ಎಫ್.ಸಿ ಹತ್ತಿರ ಬಸ್ ತಂಗುದಾಣಗಳನ್ನು (Bus Shelters) ನಿರ್ಮಿಸಲು ಹಾಗೂ ರಸ್ತೆಗೆ Rumblers/Speed brakers ಅಳವಡಿಸಲು ಕೋರಿದರು. ಅದರಂತೆ ಕ್ರಮ ವಹಿಸಲಾಗುವುದೆಂದು ತಿಳಿಸಲಾಯಿತು.

- ಲಕ್ಷ್ಮೀಪುರ ಸ್ಮಾಶಾನದಲ್ಲಿ ಹಾಗೂ 17ನೇ ಎಫ್ ಅಡ್ಡರಸ್ತೆ, 17ನೇ ಬಿ ಅಡ್ಡರಸ್ತೆ (ಎ.ಬಿ.ಸಿ.ಡಿ ಪಾರ್ಕ್) 13ನೇ & 15 ನೇ ಅಡ್ಡರಸೆ (ವುಡ್ ಪಾರ್ಕ್ ಸುತ್ತ-ಮುತ್ತ) 2ನೇ ಹಂತ ಇಂದಿರಾನಗರ, ನಾಲಾ ರಸ್ತೆ ಮರ್ಫಿಟೌನ್ ಪ್ರದೇಶಗಳಲ್ಲಿ ಬೀದಿ ದೀಪಗಳು ಇಲ್ಲದ ಕಾರಣ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು ಮತ್ತು 80 ಅಡಿ ರಸ್ತೆಯ ಎಲ್.ಇ.ಡಿ ಲೈಟ್ಸ್‌ಗಳು ಹಾಳಾಗಿರುವುದನ್ನು ಸರಿಪಡಿಸಲು ಹಾಗೂ ಕೂಡಲೇ ಇವುಗಳನ್ನು ದುರಸ್ಥಿ ಹಾಗೂ ನಿರ್ವಹಣೆ ಮಾಡಲು ಸಂಬಂಧಪಟ್ಟವರು ಕ್ರಮ ವಹಿಸಲು ಕೋರಿದರು

  **(ಕ್ರಮ:- ಸಹಾಯಕ ಅಭಿಯಂತರರು, ಬೀದಿ ದೀಪಗಳು, ಬಿ.ಬಿ.ಎಂ.ಪಿ)**

- 13ನೇ ಅಡ್ಡರಸ್ತೆ, ವಾಜಪೇಯಿ ಪಾರ್ಕ್‌ನ್ನು ಅಭಿವೃದ್ಧಿಗೊಳಿಸಲು ಹಾಗೂ ನಿರ್ವಹಣೆ ಮಾಡಲು ಸಭೆಯಲ್ಲಿ ಕೋರಿದರು.

  **(ಕ್ರಮ:- ಅಧೀಕ್ಷಕರು (ತೋಟಗಾರಿಕೆ ಇಲಾಖೆ) ಬಿ.ಬಿ.ಎಂ.ಪಿ)**

- ಇತ್ತೀಚಿನ ಭಾರಿ ಮಳೆಯಿಂದಾಗಿ ಕೃಷ್ಣ ಟೆಂಪಲ್ ರಸ್ತೆ ಹಾಗೂ ಸುತ್ತ-ಮುತ್ತಲಿನ ಪ್ರದೇಶದ ಅಡ್ಡ ರಸ್ತೆಗಳಲ್ಲಿ ಮರಗಳು ಮುತ್ತು ರೆಂಬೆ-ಕೊಂಬೆಗಳು ಕಾರ್ ಮತ್ತು ದ್ವಿಚಕ್ರ ವಾಹನಗಳ, ವಿದ್ಯುತ್ ಕಂಬಗಳ ಮೇಲೆ, ಉರುಳಿ ಬೀಳುತ್ತಿರುವುದನ್ನು ಕೂಡಲೇ ಮುಂಚಿತವಾಗಿ ಸಮೀಕ್ಷೆ ನಡೆಸಿ ಮರಗಳನ್ನು ಅಥವಾ ಕೊಂಬೆಗಳನ್ನು ಕಟಾವು ಮಾಡಲು ಅರಣ್ಯ ಇಲಾಖೆಯವರಿಗೆ ಸೂಚಿಸಲು ಸಭೆಯಲ್ಲಿ ಕೋರಿದರು.

  **(ಕ್ರಮ:- ಅರಣ್ಯ ಇಲಾಖೆ)**

AE-W-80



Scanned with CamScanner

* ಇತ್ತೀಚೆಗೆ ಕೋವಿಡ್ ಪ್ರಕರಣಗಳು ದಿನೇ-ದಿನೇ ಹೆಚ್ಚಾಗುತ್ತಿದ್ದು, ವಾರ್ಡಿನ ಮಾರ್ಷಲ್‌ಗಳು ಕೂಡಲೇ ಹೆಚ್ಚೆತ್ತುಕೊಂಡು ಮಾಸ್ಕನ್ನು ಕಡ್ಡಾಯವಾಗಿ ಹಾಕಲು ಸೂಚಿಸಿ, ಹಾಗೂ ಹಾಕದವರಿಗೆ ದಂಡವನ್ನು ವಿಧಿಸಲು ಕ್ರಮ ವಹಿಸಲು ಸಭೆಯಲ್ಲಿ ನಿವಾಸಿಗಳು ಕೋರಿದರು. ಹಾಗೂ ಈ ಬಗ್ಗೆ ಪ್ರಸ್ತುತ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಕೋವಿಡ್ ಪ್ರಕರಣಗಳು ಪತ್ತೆಯಾಗಿರುವುದಿಲ್ಲವೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

ಮೇಲ್ಕಂಡಂತೆ ಚರ್ಚಿಸಲಾಗಿರುವ ಎಲ್ಲಾ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಆಯಾ ಇಲಾಖೆಯ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಲು ಹಾಗೂ ಕ್ರಮ ವಹಿಸಿರುವ ಬಗ್ಗೆ ಮುಂದಿನ ಸಭೆಗೆ ಹಾಜರುಪಡಿಸಲು ತಿಳಿಸಿ ಮತ್ತು ಮುಂದಿನ ಸಭೆಗೆ ತೋಟಗಾರಿಕಾ ಇಲಾಯವರು, ಪೊಲೀಸ್ ಇಲಾಖೆ (ಕಾ &ಸು) ಮತ್ತು ಸಂಚಾರ ಇಲಾಖೆರವರು ಕಡ್ಡಾಯವಾಗಿ ಸಭೆಗೆ ಹಾಜರಾಗುವಂತೆ ಕ್ರಮ ವಹಿಸಲು ಕಾರ್ಯದರ್ಶಿರವರಿಗೆ ಸೂಚಿಸಿ, ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

04/6/2022

**ಕಾರ್ಯದರ್ಶಿಗಳು**
**ವಾರ್ಡ್ ಸಮಿತಿ-80**

4/6/22

**ಅಧ್ಯಕ್ಷರು**
**ವಾರ್ಡ್ ಸಮಿತಿ**
**ಹಾಗೂ ನೋಡಲ್ ಅಧಿಕಾರಿಗಳು,**
**ವಾರ್ಡ್ 80**



Scanned with CamScanner